ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:1339/2024
ಸಿ.ಡಬ್ಲ್ಯು 11 ಪಿ.ಡಬ್ಲೂ : 6

| | |
|---|---|
| ಸಾಕ್ಷಿದಾರರ ಹೆಸರು | ಹಸಮತ್ ಅಲಿ |
| ತಂದೆಯ ಹೆಸರು | ಮಹಮ್ಮದ್ ಅಲಿ |
| ವಯಸ್ಸು | 43 ವರ್ಷ |
| ಉದ್ಯೋಗ | ವೃತ್ತ ನಿರೀಕ್ಷಕರು ಕಾಪು |
| ವಾಸಸ್ಥಳ | ಕಾಪು |

ದಿನಾಂಕಃ 21-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ದಿಃ 05-06-2014 ರಿಂದ 14-10-2016 ರ ವರೆಗೆ ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 02-05-2016 ರಂದು ವಾಹನ ನಿರೀಕ್ಷಕರು ನೀಡಿದ ಐ ಎಂ ವಿ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ4 ಜಯಕರರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 18-05-2016 ರಂದು ಆದರ್ಶ ಆಸ್ಪತ್ರೆ ಯಿಂದ ಗೋಪಿಯವರಿಗೆ ಸಂಬಂದಿಸಿದ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಗಾಯ ಪ್ರಮಾಣ ಪತ್ರ ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿಯವರು ನೋಡಿ ಗುರುತಿಸಿದ್ದು ಗಾಯದ ಪ್ರಮಾಣ ಪತ್ರವನ್ನು ನಿಪಿ 18 ಎಂದು ಸಾಕ್ಷಿಯವರ ಸಹಿಯನ್ನು ನಿಪಿ. 18 ಎ ಎಂದು ಗುರುತಿಸಲಾಯಿತು.

ನಂತರ ತನಿಖೆಯನ್ನು ಪೂರ್ಣ ಗೊಳಿಸಿ ಭಾರತ ದಂಡ ಸಂಹಿತೆಯ ಕಲಂ 279 ಮತ್ತು 338 ಅಪರಾಧಗಳಿಗೆ ಸಂಬಂದಿಸಿದಂತೆ ಆರೋಪಿಯ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಗಾಯಾಳು ಗೋಪಿಯವರು 2 ತಿಂಗಳ ನಂತರ ಮೃತರಾಗಿದ್ದು ಮೃತರ ವಿಷಯಕ್ಕೆ ಸಂಬಂದಿಸಿದಂತೆ ಯುಡಿಆರ್ 16/2016 ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತೇವೆ. ನಂತರ 20-07-2016 ರಂದು ಮೃತರ ದೇಹದ ಒಳಗಿನ ಅಂಗಾಂಗಳನ್ನು ಮಂಗಳೂರಿನ ಆರ್ ಎಫ್ ಎಸ್ ಎಲ್ ಗೆ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ದಿಃ 12-09-2016 ರಂದು ಆರ್ ಎಫ್ ಎಸ್ ಎಲ್ ರವರಿಂದ ಪರೀಕ್ಷೆಯ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯವರು ಆರ್ ಅಫ್ ಎಸ್ ಎಲ್ ಪ್ರಮಾಣ ಪತ್ರ ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿಯವರು ನೋಡಿ ಗುರುತಿಸಿದ್ದು ಆರ್ ಅಫ್ ಎಸ್ ಎಲ್ ಪ್ರಮಾಣ ಪತ್ರವನ್ನು ನಿಪಿ 19 ಎಂದು, ಸಾಕ್ಷಿಯವರ ಸಹಿಯನ್ನು ನಿಪಿ. 19 ಎ ಎಂದು ಗುರುತಿಸಲಾಯಿತು. ಆರ್ ಅಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡ ನಂತರ ಆರ್ ಅಫ್ ಎಸ್ ಎಲ್ ವರದಿ ಹಾಗೂ ಶವ ಪರೀಕ್ಷಾ ವರದಿಯನ್ನು ಉಡುಪಿಯ ಜಿಲ್ಲಾಆಸ್ಪತ್ರೆಗೆ ಅಭಿಪ್ರಾಯಕ್ಕಾಗಿ ಕಳುಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿಯವರ ಪರ ಶ್ರೀ ಎ. ಆರ್ ಆರ್ ವಕೀಲರಿಂದಃ**

ಚಾಸಾ 4 ರವರ ಹೇಳಿಕೆಯನ್ನು ನೀವು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಚಾಸಾ ತಿರವರ ಹೇಳಿಕೆಯನ್ನು ಪಡೆದಿರುತ್ತೀರಾ ಎಂದರೆ ಅವರು ಪ್ರಜ್ಞಾ ಹೀನ ಸ್ಥಿತಿಯಲ್ಲಿ ಇದ್ದ ಕಾರಣ ಅವರ ಹೇಳಿಕೆಯನ್ನು ಪಡೆಯಲಿಲ್ಲ.

ದೋಷಾರೋಪಣಾ ಪಟ್ಟಿಯಲ್ಲಿ ಚಾಸಾ 2 ರವರನ್ನು ಸಾಕ್ಷಿದಾರರನ್ನಾಗಿ ತೋರಿಸಿರುತ್ತೀರ ಎಂದರೆ ಹೌದು. ಚಾಸಾ 2 ರವರು ಪ್ರಜ್ಞಾ ಹೀನ ಸ್ಥಿತಿಯಲ್ಲಿ ಇರಲಿಲಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವುದೇ ದಾಖಲೆಯನ್ನು ನೀವು ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.